ಸದರೀ ದರಖಾಸ್ತುದಾರಳಾದ 1ನೇ ಗೌರಮ್ಮ, 2ನೇ ತಿಂಮಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ರಹ್ಮಣ್ಯಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 460.

ಮೃತಪಟ್ಟ ಶಿದ್ದಲಿಂಗಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶಿದ್ದಲಿಂಗಶೆಟ್ಟಿ ವೆರಫ್ ಮರಿಶೆಟ್ಟಿಯು ಮೃತಪಟ್ಟ ಸದರೀ ಶಿದ್ದಲಿಂಗಶೆಟ್ಟಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೇ ಸ್ಥಳದ ಸದರೀ ಶಿದ್ದಲಿಂಗಶೆಟ್ಟಿ ವೆರಫ್ ಮರಿಶೆಟ್ಟಿ ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದಲಿಂಗಶೆಟ್ಟರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗಶೆಟ್ಟಿ ವೆರಫ್ ಮರಿಶೆಟ್ಟರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 461.

ಮೃತಪಟ್ಟ ಕೆಂಪಾಮೇಸ್ತ್ರೀರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಲಿಂಗ ಮೈನರ್ ಗಾರ್ಡಿಯರ್ ಮತ್ತು ತಾಯಿ ಈರಮ್ಮನು ಮೃತಪಟ್ಟ ಸದರೀ ಕೆಂಪಾಮೇಸ್ತ್ರೀಗೆ ಮಗ, ಹೆಂಡತಿ ಆಗಬೇಕೆಂಬಹಕ್ಕುದಾರೀ ಮೇಲೆ ನಾಗಮಂಗಲದ ತಾ|| ಚನ್ನಪಟ್ಟಣ ಸ್ಥಳದ ಸದರೀ ಈರಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ಕೆಂಪಾಮೇಸ್ತ್ರೀರ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಈರಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪಾಮೇಸ್ತ್ರೀರ ಆಸ್ತಿಗೆ ಹಕ್ಕುದಾರರಾದವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಕಚೇರಿಯಿಂದಾ.
ಇಸ್ತಿಹಾರ್‌ನಾಮಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರು ಸಾಗರ ತಾಲ್ಲೂಕು ತಾಳಗುಪ್ಪೇ ಕಸಬಾ ಮಠದ ಶಿವಲಿಂಗಯ್ಯನ ಖಾತೇ ಬಾಬತು ಸರ್ವೇ ನಂಬರು 109ನೇ ಜಮೀನಿನಲ್ಲಿ ಆ ಗ್ರಾಮದ ಮಡಿವಾಳ ಮಾದ ವಗ್ಯೆರೇರಿಗೆ ಸಿಕ್ಕಿದ್ದಂತ ಹಾಜರಾದ ಇಕ್ಕೇರೀ ನಾಣ್ಯಗಳು 17, ಹೊನ್ನು, 3 ಹೀಗೆ 20 ಸಾಗರ ತಾಲ್ಲೂಕು ಕಚೇರಿಯಲ್ಲಿ ಡಿಪಾಜಿಟ್ ಇಡಲ್ಪಟ್ಟು ಇದೆ.

ಸದರೀ ನಾಣ್ಯಗಳ ಬಗ್ಯೆ ಯಾವ ದಾವಾ ಯಾ ಹಕ್ಕುದಾರೀ ಉಳ್ಳವರು ರೂಬರೂಬ್ ಆಗಲಿ ಕ್ರಮವಾದ ವಕೀಲ ಮೂಲಕವಾಗಲಿ ಈ ತಾರೀಖು ಲಾಗಾಯಿತು 6 ತಿಂಗಳವಳಗೆ ಸಾಗರ ತಾಲ್ಲೂಕು ಕಚೇರೀ ರೂಬರೂ ಹಾಜರಾಗಿ ಸದರೀ ನಾಣ್ಯಗಳಿಗೆ ಇರುವ ತಮ್ಮ ಬಾಧ್ಯತೆಯನ್ನು ರುಜುವಾತು ಮಾಡಿಕೊಡಬೇಕು.

ಆ ಪ್ರಕಾರ ನಡಧುಕೊಳ್ಳದೇ ಇದ್ದರೆ ವಾಯಿದೇ ಆದನಂತರ ರೂಲ್ಸ್ ಅನುಸರಿಸಿ ಜಾರೀ ಮಾಡೋಣವಾದೀತು.

ತಾರೀಖು 23ನೇ ಆಗಸ್ಟ್ 1887ನೇ ಇಸವಿ ಮೊಕ್ತಾಂ ಶಿವಮೊಗ್ಗಾ.

ವಿ. ಪಿ. ಮಾಧವರಾವ್,
ಡೆಪ್ಯೂಟಿ ಕಮ್ಮಿಷನರ್.